RNU AIR DHARWAD

# JUNE 04, 2024

## ALL INDIA RADIO - DHARWAD

## PRADESH SAMACHARA (KANNADA) 7:05 AM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **18ನೇ ಸಾರ್ವತ್ರಿಕ ಲೋಕಸಭೆ ಚುನಾವಣೆ; ರಾಜ್ಯದ 28 ಕ್ಷೇತ್ರಗಳ ಮತ ಎಣಿಕೆ, ಇಂದು ಬೆಳಗ್ಗೆ 8 ಗಂಟೆಗೆ ಆರಂಭ.**
- **ರಾಜ್ಯದ 28 ಜಿಲ್ಲಾಡಳಿಗಳಿಂದ ಮತ ಎಣಿಕೆಗೆ, ಸಕಲ ಸಿದ್ಧತೆ; ಚುನಾವಣಾ ಆಯೋಗದ ವೀಕ್ಷಕರಿಂದ, ಮೆಚ್ಚುಗೆ.**
- **'ಲ್ಯಾಂಡ್ ಬೀಟ್'; ಸರ್ಕಾರಿ ಆಸ್ತಿಗಳ ಕಾವಲಿಗೆ, ಕಂದಾಯ ಇಲಾಖೆಯಿಂದ, ನೂತನ ಹೆಜ್ಜೆ.**
- **ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆ ಪ್ರಕರಣ; ಕಾನೂನಿನ ಅಡಿ ಕಠಿಣ ಕ್ರಮ – ಎಸ್.ಕೆ. ಒಂಟಗೋಡಿ.**

<><><>

**ಈಗ ವಾರ್ತೆಗಳ ವಿವರ**

<><><>

**18ನೇ ಲೋಕಸಭೆ ಸಾರ್ವತ್ರಿಕ ಚುನಾವಣೆಯ ಮತದಾನ, ದೇಶಾದ್ಯಂತ 7 ಹಂತಗಳಲ್ಲಿ ಹಾಗೂ ರಾಜ್ಯದ 28 ಲೋಕಸಭಾ ಮತಕ್ಷೇತ್ರಗಳಿಗೆ, ಎರಡು ಹಂತಗಳಲ್ಲಿ ನಡೆದಿದೆ. 14 ಜಿಲ್ಲೆಗಳನ್ನು ಒಳಗೊಂಡ ದಕ್ಷಿಣ ಕರ್ನಾಟಕದ, 14 ಲೋಕಸಭಾ ಮತಕ್ಷೇತ್ರಗಳಿಗೆ, ಏಪ್ರಿಲ್ 26 ರಂದು ಮತದಾನವಾಗಿತ್ತು. 14 ಜಿಲ್ಲೆಗಳನ್ನು ಒಳಗೊಂಡ, ಕಲ್ಯಾಣ ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕ ಭಾಗದ, 14 ಲೋಕಸಭಾ ಮತಕ್ಷೇತ್ರಗಳಿಗೆ, ಮೇ 7 ರಂದು ಮತದಾನವಾಗಿದೆ.**

<><><>

ಇಂದು, ಬೆಳಗ್ಗೆ 8 ಗಂಟೆಯಿಂದ 28 ಲೋಕಸಭಾ ಕ್ಷೇತ್ರಗಳ ಮತ ಎಣಿಕೆ ಕಾರ್ಯ 28 ಜಿಲ್ಲಾ ಕೇಂದ್ರಗಳಲ್ಲಿ, ಮೂರು ಹಂತದ ಬಿಗಿ ಭದ್ರತೆಯಲ್ಲಿ ಆರಂಭವಾಗಲಿದೆ. ಕೇಂದ್ರದಿಂದ ಆಗಮಿಸಿರುವ ವೀಕ್ಷಕರು, ಜಿಲ್ಲಾಡಳಿತಗಳ ಸಿದ್ಧತೆಗೆ ಮೆಚ್ಚುಗೆ ವ್ಯಕ್ತ ಪಡಿಸಿದ್ದಾರೆ.

<><><>

ಯಾದಗಿರಿ ಜಿಲ್ಲೆ, ಸುರಪುರ ವಿಧಾನಸಭಾ ಮೀಸಲು ಅಭ್ಯರ್ಥಿ ಕ್ಷೇತ್ರದ, ಉಪ ಚುನಾವಣೆಗೆ ಮತದಾನ ಸಹ, ಕಳೆದ ಮೇ 7 ರಂದು ಜರುಗಿತ್ತು. ಯಾದಗರಿಯ, ಸ್ವಪ್ನಾ ಗ್ರೌಂಡ್ಸ್‌ನಲ್ಲಿರುವ ಸರ್ಕಾರಿ ಮಾದರಿ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಎಣಿಕೆ ಕಾರ್ಯ, ಇಂದು ಬೆಳಗ್ಗೆ 8 ಗಂಟೆಗೆ ಆರಂಭವಾಗಲಿದೆ.

<><><>

ವಿದ್ಯುನ್ಮಾನ ಮತಯಂತ್ರಗಳಲ್ಲಿ ದಾಖಲಾದ ಮತಗಳ ಎಣಿಕೆ, ಅಂದಾಜು 3 ತಾಸುಗಳಲ್ಲಿ, ಪೂರ್ಣಗೊಳ್ಳುವ ಸಾಧ್ಯತೆ ಇದೆ. ಬ್ಯಾಲೆಟ್ ಹಾಗೂ ಅಂಚೆ ಮತಗಳ ಎಣಿಕೆ ಕಾರ್ಯ ಮೊದಲು ಆರಂಭಗೊಂಡರೂ, ಮಧ್ಯಾಹ್ನದ ವರೆಗೆ ಮುಂದುವರೆದು, 2 ಗಂಟೆಯ ಒಳಗಾಗಿ ಸ್ಪಷ್ಟ ಚಿತ್ರಣ ದೊರಕಲಿದೆ ಎಂದು, ಆಯಾ ಜಿಲ್ಲೆಗಳ ಚುನಾವಣಾಧಿಕಾರಿಗಳು, ತಿಳಿಸಿದ್ದಾಗಿ ನಮ್ಮ ಪ್ರತಿನಿಧಿಗಳು ವರದಿ ಮಾಡಿದ್ದಾರೆ.

<><><>

ಒಟ್ಟು 2 ಲೋಕಸಭಾ ಮತಕ್ಷೇತ್ರಗಳನ್ನು ಒಳಗೊಂಡ, ಬೆಳಗಾವಿ-ಚಿಕ್ಕೋಡಿ ಸಾಮಾನ್ಯ ಅಭ್ಯರ್ಥಿ ಕ್ಷೇತ್ರಗಳ ಮತ ಎಣಿಕೆ, ಈ ಬೆಳಗ್ಗೆ 8 ಗಂಟೆಗೆ ಆರಂಭವಾಗಲಿದೆ. ಪ್ರದೇಶ ಸಮಾಚಾರಕ್ಕಾಗಿ ನಮ್ಮ ಬೆಳಗಾವಿ ಜಿಲ್ಲೆ ಪ್ರತಿನಿಧಿಯಿಂದ, ಹೆಚ್ಚಿನ ಮಾಹಿತಿ..

<><><>

ಕೆ.ಎನ್. ದೊಡ್ಡಮನಿ ಧ್ವನಿ 45 ಸೆಕೆಂದುಗಳು

<><><>

ಸಾಮಾನ್ಯ ಅಭ್ಯರ್ಥಿ ಕ್ಷೇತ್ರವಾದ, ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದ, ಮತ ಎಣಿಕೆ, ಸುರತ್ಕಲ್‌ನ ನ್ಯಾಶನಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ, ಜರುಗಲಿದೆ. ನಮ್ಮ ಮಂಗಳೂರು ಪ್ರತಿನಿಧಿ ಆಕಾಶವಾಣಿಗೆ ಮಾಹಿತಿ ನೀಡಿದ್ದಾರೆ.

<><><>

ಸುರೇಶ ಪಳ್ಳಿ ಧ್ವನಿ 45 ಸೆಕೆಂದುಗಳು

<><><>

ದಾವಣಗೆರೆ ಲೋಕಸಭಾ ಕ್ಷೇತ್ರದ ಮತ ಎಣಿಕೆ ಕಾರ್ಯ, ಬೆಳಗ್ಗೆ 8 ಗಂಟೆಗೆ ಆರಂಭವಾಗಲಿದೆ. ನಮ್ಮ ದಾವಣಗೆರೆ ಪ್ರತಿನಿಧಿ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಕೆ.ಎಸ್. ಚನ್ನಬಸಪ್ಪ 41 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಲೋಕಸಭಾ ಚುನಾವಣೆಯ ಮತ ಎಣಿಕೆಯ, ಕ್ಷಣ ಕ್ಷಣದ ಮಾಹಿತಿ ನೀಡಲು, ಬೆಂಗಳೂರು ಆಕಾಶವಾಣಿ ಸುದ್ದಿ ವಿಭಾಗ, ಸನ್ನದ್ಧವಾಗಿದೆ. ನಮ್ಮ ಪ್ರತಿನಿಧಿಗಳು ಮತ ಎಣಿಕೆ ಕೇಂದ್ರಗಳಿಂದ ನೇರವಾಗಿ ವರದಿ ಮಾಡಲಿದ್ದಾರೆ.

ಇಂದು ಬೆಳಗ್ಗೆ 9 ಗಂಟೆಯಿಂದ ಆರಂಭವಾಗಿ, ಪ್ರತಿ ಗಂಟೆಗೊಮ್ಮೆ ಸುದ್ದಿ ಮುಖ್ಯಾಂಶಗಳು ಹಾಗೂ ವಿಶೇ ’ ವಾರ್ತಾ ಪ್ರಸಾರ ಬಿತ್ತರಗೊಳ್ಳಲಿದೆ.

ಪ್ರಾದೇಶಿಕ ಸುದ್ದಿ ವಿಭಾಗ, ಚುನಾವಣಾ ಫಲಿತಾಂಶ ಕುರಿತ, ತಜ್ಞರಿಂದ ವಿಶೇ ’ ವಿಶ್ಲೇ ’ಣೆ, ಬೆಳಗ್ಗೆ 11.05 ರಿಂದ 12 ಡಾಕ್ಟರ್ ಆಶಾ ಕೃಷ್ಣಸ್ವಾಮಿ, ರಾಮಚಂದ್ರರೆಡ್ಡಿ ಪಾಟೀಲ ಅವರಿಂದ, ಹಾಗೂ ಮಧ್ಯಾಹ್ನ 3.15 ರಿಂದ 4.30ರ ವರೆಗೆ, ಮೀರಾ ಭಾರದ್ವಾಜ್ ಹಾಗೂ ಬಿ.ಜಿ. ವಿಜಯ್ ಅವರ ಒಳನೋಟಗಳನ್ನು, ಪ್ರಸಾರ ಮಾಡಲಿದೆ.

ಈ ವಿಶೇ ’ ಕಾರ್ಯಕ್ರಮಗಳು, ರಾಜ್ಯದ ಎಲ್ಲ ಬಾನುಲಿ ಕೇಂದ್ರಗಳ ಮೂಲಕ, 612 ಕಿಲೋ ಹರ್ಟ್ಸ್ ತರಂಗಾಂತರಗಳಲ್ಲಿ ಬಿತ್ತರಗೊಳ್ಳಲಿವೆ.

<><><>

ಸೋಮವಾರ, ಜೂನ್ 3 ರಂದು, ವಿಧಾನ ಪರಿ ’ತ್ತಿನ, ಮೂರು ಪದವಿಧರ ಹಾಗೂ ಮೂರು ಶಿಕ್ಷಕರ ಮತ ಕ್ಷೇತ್ರಗಳಿಗೆ, ಬೆಳಗ್ಗೆ 8 ರಿಂದ ಸಂಜೆ 4 ಗಂಟೆಯ ವರೆಗೆ ಮತದಾನ ನಡೆಯಿತು. ಈಶಾನ್ಯ ಪದವಿಧರ ಮತಕ್ಷೇತ್ರದಲ್ಲಿ, ಶೇಕಡ 69 ದಶಾಂಶ 5-1, ನೈಋತ್ಯ ಪದವಿಧರ ಮತಕ್ಷೇತ್ರದಲ್ಲಿ, 78 ದಶಾಂಶ 1-9, ಬೆಂಗಳೂರು ಪದವಿಧರ ಮತಕ್ಷೇತ್ರದಲ್ಲಿ, 65 ದಶಾಂಶ 8-6, ಆಗ್ನೇಯ ಶಿಕ್ಷಕರ ಮತಕ್ಷೇತ್ರದಲ್ಲಿ, 95 ದಶಾಂಶ 2-7, ನೈಋತ್ಯ ಶಿಕ್ಷಕರ ಮತಕ್ಷೇತ್ರದಲ್ಲಿ, 82 ದಶಾಂಶ 5-6 ಹಾಗೂ ದಕ್ಷಿಣ ಶಿಕ್ಷಕರ ಮತಕ್ಷೇತ್ರದಲ್ಲಿ 88 ದಶಾಂಶ 0-7 ರಷ್ಟು, ಮತದಾನ ದಾಖಲಾಗಿದೆ ಎಂದು, ಸೋಮವಾರ ಸಂಜೆ 8 ಗಂಟೆಗೆ ಚುನಾವಣಾ ಆಯೋಗ, ಜಾಲತಾಣ ಎಕ್ಸ್‌ನಲ್ಲಿ ಪ್ರಕಟಿಸಿದೆ.

<><><>

ಕರ್ನಾಟಕ ವಿಧಾನಸಭೆಯಿಂದ ವಿಧಾನಪರಿ ’ತ್‌ಗೆ, 11 ಸ್ಥಾನಗಳಿಗಾಗಿ ನಡೆಯುವ ದ್ವೈ ವಾರ್ಷಿಕ ಚುನಾವಣೆಗೆ, ನಾಮಪತ್ರ ಸಲ್ಲಿಸಲು ಸೋಮವಾರ ಕೊನೆ ದಿನವಾಗಿತ್ತು. ಗುರುವಾರ, ಇದೇ 13 ರಂದು ಚುನಾವಣೆ ನಡೆಯಲಿದೆ. ಕಾಂಗ್ರೆಸ್ ಪಕ್ಷಕ್ಕೆ 7 ಸ್ಥಾನಗಳನ್ನು ಗೆಲ್ಲುವ ಅವಕಾಶವಿದ್ದು, ಪಕ್ಷದ 7 ಅಭ್ಯರ್ಥಿಗಳು ನಾಮಪತ್ರ, ಸಲ್ಲಿಸಿದ್ದಾರೆ. ಹಿರಿಯರ ಮನೆಯ, 3 ಸ್ಥಾನಗಳನ್ನು ಗೆಲ್ಲುವ ಅವಕಾಶ ಹೊಂದಿರುವ, ಬಿಜೆಪಿ ಅಭ್ಯರ್ಥಿಗಳಾಗಿ, ಮೂವರು ಉಮೇದುವಾರಿಕೆ ದಾಖಲಿಸಿದ್ದಾರೆ. ಒಂದು ಸ್ಥಾನ ಗೆಲ್ಲುವ ಅವಕಾಶವಿರುವ, ಜೆ.ಡಿ.ಎಸ್. ಪಕ್ಷದ ಅಭ್ಯರ್ಥಿಯಾಗಿ ಜವರಾಯಿಗೌಡ, ನಾಮಪತ್ರ ಸಲ್ಲಿಸಿದ್ದಾರೆ.

<><><>

ಕಂದಾಯ ಇಲಾಖೆ, ರಾಜ್ಯಾದ್ಯಂತ ಸರ್ಕಾರಿ ಆಸ್ತಿಗಳ ಕಾವಲಿಗೆ, 'ಲ್ಯಾಂಡ್ ಬೀಟ್ ವ್ಯವಸ್ಥೆ' ಜಾರಿಗೊಳಿಸಿದೆ. ಮೂರು ತಿಂಗಳಿಗೊಮ್ಮೆ, ಎಲ್ಲ 31 ಜಿಲ್ಲಾಡಳಿತಗಳು ಸರ್ಕಾರಿ ಆಸ್ತಿಗಳ ಮೌಲ್ಯ ಮಾಪನ ನಡೆಸುವುದು, ಕಡ್ಡಾಯವಾಗಿದೆ. ಈ ಬಾರಿ ಕೋಲಾರ ಜಿಲ್ಲೆ, ರಾಜ್ಯದ ಇತರ ಎಲ್ಲ ಜಿಲ್ಲೆಗಳಿಗಿಂತ, ಮುಂಚೂಣಿಯಲ್ಲಿದ್ದು, ಆಪ್‌ನಲ್ಲಿ ಅತೀ ಹೆಚ್ಚು ವಿವರಗಳನ್ನು ದಾಖಲಿಸಿ, ಮಾದರಿಯಾಗಿದೆ ಎಂದು, ಜಿಲ್ಲಾಧಿಕಾರಿ ಅಕ್ರಂ ಪಾಷಾ ತಿಳಿಸಿದ್ದಾರೆ.

ಸರ್ಕಾರಿ ಆಸ್ತಿಗಳ ಕಾವಲಿಗೆ ಇ-ತಂತ್ರಾಂಶದಲ್ಲಿ ದಾಖಲೆ ಹಾಗೂ ಜಿಯೋ ಫೆನ್ಸ್ ಮೂಲಕ ನಿಗಾ ವಹಿಸಲಾಗುವುದು ಎಂದು, ಅವರು ತಿಳಿಸಿದರು. ಕೋಲಾರ ಜಿಲ್ಲಾಡಳಿತ, ಶೇಕಡ 71 ದಶಾಂಶ 7-1 ರ ್ಟ ಸರ್ಕಾರಿ ಜಮೀನು, ಕೆರೆ, ಕುಂಟೆ, ಗೋಮಾಳ ವಿವರಗಳನ್ನು ಆಪ್‌ನಲ್ಲಿ ದಾಖಲಿಸಿ, ರಾಜ್ಯಕ್ಕೆ ಮಾದರಿಯಾಗಿದೆ.

<><><>

ಹೆಣ್ಣು ಭ್ರೂಣ ಹತ್ಯೆ ಪ್ರಕರಣ ವರದಿಯಾದ ಹಿನ್ನೆಲೆ, ಬಾಗಲಕೋಟೆ ಜಿಲ್ಲೆ ಮುಧೋಳ ತಾಲೂಕು, ಮಹಾಲಿಂಗಪುರದಲ್ಲಿ, ಕುಕೃತ್ಯಕ್ಕೆ ಬಳಸಿದ ಕಟ್ಟಡಕ್ಕೆ, ರಾಜ್ಯ ಮಾನವ ಹಕ್ಕುಗಳ ಆಯೋಗದ ಸದಸ್ಯ ಎಸ್.ಕೆ. ಒಂಟಗೋಡಿ ಭೇಟಿ ನೀಡಿ, ಪರಿಶೀಲಿಸಿದರು. ಬಳಿಕ, ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೆಣ್ಣು ಭ್ರೂಣ ಹತ್ಯೆ ಅಮಾನವೀಯ ಘಟನೆ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕ್ಕಾಗಿ, ಆಯೋಗ ಕ್ರಮ ಕೈಗೊಳ್ಳಲಿದೆ ಎಂದರು.

<><><>

ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಸರ್ ಸಿದ್ದಪ್ಪ ಕಂಬಳಿ ಕಾನೂನು ಮಹಾವಿದ್ಯಾಲಯದ ವಿಶ್ರಾಂತ ಪ್ರಾಂಶುಪಾಲ, ಡೀನ್ ಹಾಗೂ ಹೆಸರಾಂತ ಲೇಖಕ ಪ್ರೊಫೆಸರ್ ಜಿ.ವೈ.ಅಜ್ಜಪ್ಪ, ಸೋಮವಾರ ಮೈಸೂರಿನಲ್ಲಿ ನಿಧನರಾದರು. ಅವರಿಗೆ 95 ವರ್ಷ ವಯಸ್ಸಾಗಿತ್ತು.

<><><>

ಮಾಜಿ ಸಚಿವ ಹಾಗೂ ಆನೇಕಲ್ ಶಾಸಕ, ಎಂ.ಪಿ.ಕೇಶವಮೂರ್ತಿ ಸೋಮವಾರ ಬೆಂಗಳೂರಿನಲ್ಲಿ ನಿಧನರಾದರು. ಅವರಿಗೆ 85 ವರ್ಷ ವಯಸ್ಸಾಗಿತ್ತು.

<><><>

ಅಗ್ನಿವೀರ ಯೋಜನೆ ಅಡಿ ನೇಮಕಗೊಂಡ ಯೋಧರು, ಕಳೆದ ಆರು ತಿಂಗಳಲ್ಲಿ ವಿಶೇಷ ತರಬೇತಿ ಪೂರ್ಣಗೊಳಿಸಿದ್ದು, ಯುದ್ಧ ಸೇರಿದಂತೆ, ತುರ್ತು ಸಂದರ್ಭಗಳನ್ನು ನಿಭಾಯಿಸುವ ಕೌಶಲ ಹೊಂದಿದ್ದಾರೆ ಎಂದು, ಬ್ರಿಗೇಡಿಯರ್ ಜಿತೇನ್ ಅಲೆ ಶ್ಲಾಘಿಸಿದ್ದಾರೆ. ಬೆಂಗಳೂರಿನ ಸೇನಾ ತರಬೇತಿ ಕೇಂದ್ರದಲ್ಲಿ, ಯಶಸ್ವಿಯಾಗಿ ತರಬೇತಿ ಪೂರ್ಣಗೊಳಿಸಿದ, ಅಗ್ನಿವೀರ ಮೂರನೇ ತಂಡದ, ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನದಲ್ಲಿ, ಅವರು ಗೌರವ ವಂದನೆ ಸ್ವೀಕರಿಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 18ನೇ ಸಾರ್ವತ್ರಿಕ ಲೋಕಸಭೆ ಚುನಾವಣೆ; ರಾಜ್ಯದ 28 ಕ್ಷೇತ್ರಗಳ ಮತ ಎಣಿಕೆ, ಇಂದು ಬೆಳಗ್ಗೆ 8 ಗಂಟೆಗೆ ಆರಂಭ.
- ರಾಜ್ಯದ 28 ಜಿಲ್ಲಾಡಳಿಗಳಿಂದ ಮತ ಎಣಿಕೆಗೆ, ಸಕಲ ಸಿದ್ಧತೆ; ಚುನಾವಣಾ ಆಯೋಗದ ವೀಕ್ಷಕರಿಂದ, ಮೆಚ್ಚುಗೆ.
- 'ಲ್ಯಾಂಡ್ ಬೀಟ್'; ಸರ್ಕಾರಿ ಆಸ್ತಿಗಳ ಕಾವಲಿಗೆ, ಕಂದಾಯ ಇಲಾಖೆಯಿಂದ, ನೂತನ ಹೆಜ್ಜೆ.
- ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆ ಪ್ರಕರಣ; ಕಾನೂನಿನ ಅಡಿ ಕಠಿಣ ಕ್ರಮ – ಎಸ್.ಕೆ. ಒಂಟಗೋಡಿ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.**

<><><>

**ಹರ್ಷ**

**ತೆ**